



## ಟೆಂಪಲ್ ಒಡವೆ

ಪಾರಂಪರಿಕ ಆಭರಣ ಇದೀಗ ಫ್ಯಾಷನ್‌ನ ಹಾದಿ ಹಿಡಿದಿದೆ. ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣ ಫ್ಯಾಷನ್‌ಗೂ ಸೈ ಎಂಬುದನ್ನು ಸಾಬೀತುಪಡಿಸಿದೆ. ನವನವೀನ ವಿನ್ಯಾಸಗಳ ಆಭರಣ ಕಂಡಾಗ ಮಹಿಳೆಯರ ಮೊಗದಲ್ಲೂ ಅಪರಂಜಿಯಂಥ ನಗು ಚಿಮ್ಮುತ್ತದೆ. ರೇಷ್ಮೆಸೀರೆ ಉಟ್ಟಾಗ ತೊಟ್ಟುಕೊಳ್ಳಲೆಂದೇ ದೇವಾನುದೇವತೆಗಳ ಚಿತ್ರವಿರುವ ಆಭರಣಗಳನ್ನು ಮಹಿಳೆ ಇಷ್ಟಪಡುತ್ತಾಳೆ. ಲಕ್ಷ್ಮಿ ಓಲೆ, ಲಕ್ಷ್ಮಿ ಚಿತ್ರವಿರುವ ನೆಕ್ಲೆಸ್, ಬಳೆಗಳು, ಬ್ರೇಸ್ಲೆಟ್‌ಗಳು, ಇಷ್ಟಗಲ ಕಾಸಿನ ಸರ ಎಲ್ಲದರಲ್ಲೂ ಹೊಸ ವಿನ್ಯಾಸಗಳೇ. ಇವೆಲ್ಲವೂ ಕೈಗೆಟಕುವ ಬೆಲೆಯಲ್ಲಿ ಸಿಕ್ಕಿದರಂತೂ ಮಹಿಳೆಗೆ ಸ್ವರ್ಗಕ್ಕೆ ಮೂರೇ ಗೇಣು.

ಹುಡುಗಿ ಚಿಕ್ಕವಳಿರುವಾಗಲೇ ಅಲಂಕಾರಕ್ಕೆ, ಒಡವೆ ವಿನ್ಯಾಸಗಳ ಬಗ್ಗೆ ಒಲವು ಬೆಳೆಸಿಕೊಂಡಿರುತ್ತಾಳೆ. ಇದು ಆಕೆಗೆ ಅಜ್ಜಿ–ಅಮ್ಮಂದಿರ ಬಳುವಳಿಯೂ ಆಗಿರಬಹುದು. ಚಂದದ ಕುಸುರಿ ಇರುವ ಆಭರಣವನ್ನು ಕೊಂಡುಕೊಳ್ಳಲು ತವಕ ಪಡುವ ಮಹಿಳೆಗೆ ಈ ಹೂಡಿಕೆ ಹಿಂದೆ ಚಿನ್ನ ಆಪತ್ಕಾಲದಲ್ಲಿ ನೆರವಾಗುತ್ತದೆ ಎಂಬ ಜಾಗೃತ ಮನಸ್ಸೂ ಇರುತ್ತದೆ.

ಚಿನ್ನ ಯಾವತ್ತೂ ಹೆಣ್ಣಿನ ಭಾವನೆಗಳನ್ನು ಜೀವಂತವಾಗಿಸುತ್ತದೆ. ಹಾಗಾಗಿ ಹಳದಿ ಲೋಹದ ಮೇಲಿನ ವ್ಯಾಮೋಹವೂ ಮಹಿಳೆಯ ಮನಸ್ಸಿನಿಂದ ಎಂದಿಗೂ ದೂರವಾಗುವುದಿಲ್ಲ.



ದೈವ ಭಕ್ತಿ ಬಿಂಬಿಸುವ ಆಭರಣಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಕೆಲವರಿಗೆ ಭಕ್ತಿ, ಇನ್ನು ಕೆಲವರಿಗೆ ನೆಮ್ಮದಿ ನೀಡುವ ದೇವರ ಚಿತ್ತಾರಗಳನ್ನೊಳಗೊಂಡ ಈ ತರಹದ ಆಭರಣಗಳು ಇತ್ತೀಚೆಗೆ ಫ್ಯಾಷನ್ ಜಗತ್ತಿನಲ್ಲಿ ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿವೆ.

ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಆದ ನಂತರವಂತೂ ಶ್ರೀರಾಮನ ನಾಮ ಜಪದೊಂದಿಗೆ ರಾಮಾಯಣದಲ್ಲಿ ಬರುವ ರಾಮ, ಸೀತೆ, ಲಕ್ಷ್ಮಣ, ಆಂಜನೇಯನನ್ನು ಒಳಗೊಂಡ ಪದಕಗಳು, ಹಾರಗಳು, ಕಡಗಗಳು ಮಾರುಕಟ್ಟೆಗೆ ಬಂದಿವೆ, ಇವುಗಳ ಜೊತೆ ಆಂಜನೇಯ ಗದೆ ಹಿಡಿದು ಹಾರುವ ಪುಟ್ಟದಾದ ವಿಗ್ರಹಗಳು, ಆಂಜನೇಯನ ಗದೆಯ ವಿನ್ಯಾಸ ಕೀ ಚೈನ್ ರೂಪದಲ್ಲಿ ಟ್ರೆಂಡಿಯಾಗಿದೆ.

ಈಗೀಗ ಯುವಕ–ಯುವತಿಯರು ತಮಗಿಷ್ಟವಾದ ದೇವ ದೇವತೆಗಳ ಚಿತ್ತಾರವಿರುವ ಆಭರಣಗಳನ್ನು ಧರಿಸುತ್ತಿದ್ದಾರೆ. ಆಯಾಯ ಹಬ್ಬಕ್ಕೆ ಅನುಗುಣವಾಗಿ ಮತ್ತು ದೇವಸ್ಥಾನಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಇಂಥ ಆಭರಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಶಿವನ ದೇವಸ್ಥಾನಕ್ಕೆ ಹೋಗುವ ಸಂದರ್ಭದಲ್ಲಿ ಓಂ ಆಕೃತಿ ಇಲ್ಲವೇ ಹರ ಹರ ಮಹಾದೇವ ಎಂಬ ಬರಹದ ಚಿತ್ತಾರವಿರುವ ಉಡುಪಿನ ಜೊತೆ ರುದ್ರಾಕ್ಷಿ ಮಾಲೆ, ಕೈಗೆ ತ್ರಿಶೂಲ, ಡಮರು, ಗಂಟೆ, ಸ್ವಸ್ತಿಕ್ ಚಿಹ್ನೆ ಇರುವ ಬೆಳ್ಳಿ, ಬಂಗಾರ, ಹಿತ್ತಾಳೆ, ತಾಮ್ರ, ಪಂಚಲೋಹಗಳಿಂದ ತಯಾರಾದ ಸುಂದರವಾದ ಉಂಗುರ, ಬ್ರೇಸ್ಲೆಟ್‌ಗಳನ್ನು ಧರಿಸುತ್ತಿದ್ದಾರೆ, ಕೆಲ ಯುವತಿಯರು ತ್ರಿಶೂಲ ಹಾಗೂ ಓಂ ಚಿಹ್ನೆಯುಳ್ಳ ಕಿವಿಯೋಲೆ ಹಾಗೂ ಮೂಗುತಿಯನ್ನೂ ಧರಿಸುತ್ತಿರುವುದು ಇತ್ತೀಚಿನ ಬೆಳವಣಿಗೆ.

ಬ್ಲಾಕ್ ಮೆಟಲ್, ಸಿಲ್ವರ್ ಮೆಟಲ್‌ಗಳಲ್ಲಿ ಸಿಗುವ ಈ ತರಹದ ಆಭರಣಗಳು ನೋಡಲು ಆಕರ್ಷಕವಾಗಿದ್ದು, ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಈ ಆಭರಣಗಳು ಸಾಂಪ್ರದಾಯಿಕ–ಆಧುನಿಕ ಎರಡೂ ತರಹದ ಉಡುಪುಗಳಿಗೆ ಮ್ಯಾಚ್ ಆಗುವಂತಿವೆ. ಬರೀ ಕಪ್ಪು ಬಣ್ಣದ ದಾರದಲ್ಲಿ ಪೋಣಿಸಿದ ಓಂ ಆಕೃತಿ ಹಾಗೂ ಸ್ವಸ್ತಿಕ್‌ಗಳು ಕೂಡ ಜನರ ಗಮನ ಸೆಳೆಯುತ್ತಿವೆ. ಮೊದಲೆಲ್ಲಾ ಕೈಗೆ ಫ್ರೆಂಡ್‌ಶಿಪ್ ಬ್ಯಾಂಡ್ ಧರಿಸುತ್ತಿದ್ದ ಯುವಕ ಯುವತಿಯರು ಇದೀಗ ಕಪ್ಪು ದಾರದಲ್ಲಿ ಪೋಣಿಸಿದ ಓಂ ಹಾಗೂ ಸ್ವತ್ತಿಕ್ ಚಿಹ್ನೆಯ ಪುಟ್ಟದಾದ ಲಾಕೆಟ್‌ಗಳನ್ನು ಕೈಗೆ ಧರಿಸುತ್ತಿದ್ದಾರೆ. ಅಲ್ಲದೆ ವಿವಿಧ ರೀತಿಯ ಮೆಟಲ್‌ಗಳಲ್ಲಿ ದೊರೆಯುವ ಪೆಂಡೆಂಟ್‌ಗಳನ್ನು ಕಪ್ಪು ದಾರ ಇಲ್ಲವೇ ಸಣ್ಣದಾದ ಸರದಲ್ಲಿ ಪೋಣಿಸಿ ಧರಿಸುವುದೂ ಇದೆ. ಸ್ವಸ್ತಿಕ್, ಡಮರು, ತ್ರಿಶೂಲ, ಹಾವುಗಳ ವಿನ್ಯಾಸದ ವಿವಿಧ ಮೆಟಲ್‌ಗಳ ಉಂಗುರಗಳು ಕೂಡ ದೈವೀಭಾವನೆ ಸೃಷ್ಟಿಸಲು ಸಹಕಾರಿಯಾಗಿವೆ.

ಈ ತರಹದ ಆಭರಣಗಳನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ ಉಡುಪುಗಳಿಗೆ ಮ್ಯಾಚ್ ಮಾಡಿ ಧರಿಸಿದರೆ ಫ್ಯಾಷನಬಲ್ ಆಗಿ ಕಾಣಬಹುದು. ಕ್ರೈಸ್ತ ಬಾಂಧವರೂ ಏಸುಕ್ರಿಸ್ತನ ಶಿಲುಬೆಯನ್ನು ಹೋಲುವ ವಿನ್ಯಾಸವನ್ನು ಆಭರಣದಲ್ಲಿ ಮಾಡಿಸಿ ತೊಟ್ಟುಕೊಳ್ಳುವುದು ಕೂಡ ಫ್ಯಾಷನ್ ಟ್ರೆಂಡ್ ಆಗಿದೆ.